**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**MVC** 577/2024 **RW**-1

**ದಿಃ19.06.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆಃ2 ನೇ ಎದುರುದಾರ ಪರ ವಕೀಲರಾದ ಶ್ರೀ AMS ರವರಿಂದಃ**

ನಾನು ಈ ಅರ್ಜಿಯಲ್ಲಿ 1 ನೇ ಎದುರುದಾರನಾಗಿದ್ದು, ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಈ ದಿನ ನ್ಯಾಯಾಲಯದ ಮುಂದೆ ಸಲ್ಲಿಸುತ್ತಿದ್ದು, ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ. ಅದರಲ್ಲಿರುವ ಸಹಿ ನನ್ನದು.

ನಾನು ನನ್ನ ತಕರಾರಿಗೆ ಸಂಬಂಧಿಸಿದಂತೆ MLC VOLUME NO 73 ನ್ನು ತಾಲೂಕ ಆಸ್ಪತ್ರೆ ಮುಂಡಗೋಡ (UK) ಅನುಕ್ರಮವಾಗಿ 1 ರಿಂದ 103 ಪುಟಗಳನ್ನು ಹೊಂದಿದ್ದು ಸದರಿ ಪುಸ್ತಕವನ್ನು ನಿಶಾನೆ ಆರ 2 ಮತ್ತು ಅದರಲ್ಲಿರುವ 40 ನೇ ಪುಟವನ್ನು ಈ ಪ್ರಕರಣದ ದಾಖಲೆಯಾಗಿ ನಿಶಾನೆ ಆರ 2(ಎ) ಎಂದು ಗುರ್ತಿಸಲಾಯಿತು. ನಿಶಾನೆ ಆರ 1 ನ್ನು ಸಾಕ್ಷಿಗೆ ತೋರಿಸಿ ಆ ದಾಖಲೆಯನ್ನು ತಮ್ಮ ಆಸ್ಪತ್ರೆಯಿಂದಲೆ ನೀಡಲಾಗಿದ್ದು ಈ ಕೇಸನ ಅರ್ಜಿದಾರನನ್ನು ನಾನೇ ಚಿಕಿತ್ಸೆಗೆ ಒಳಪಡಿಸಿದ್ದು ಎನ್ನುತ್ತಾರೆ. ನಿಶಾನೆ ಆರ 1 ರಲ್ಲಿ ಇರುವುದು ನನ್ನದೆ ಸಹಿ ಎನ್ನುತ್ತಾರೆ. ಸದರಿ ಚಿಕಿತ್ಸೆಗೆ ಅವರು ಒಬ್ಬರೆ ಬಂದಿದ್ದರು ಅವರ ಜೊತೆ ಯಾರು ಬಂದಿರಲಿಲ್ಲ. ಸದರಿ ದಾಖಲೆಯಲ್ಲಿ age of the injuries about 24 to 48 ತಾಸುಗಳು ಎಂಬುವುದಾಗಿ ನಮೂದು ಇದೆ ಎಂದರೆ ಸರಿ. ನಂತರ ನಾನು ಅವರಿಗೆ ಚಿಕಿತ್ಸೆ ನೀಡಿರುತ್ತೇನೆ.

**ಪಾಟೀ ಸವಾಲುಃ ಅರ್ಜಿದಾರ ಪರ ವಕೀಲರಾದ ಶ್ರೀ ಎಂ.ಬಿ.ಆರವರಿಂದ.**

ಸ್ವಾಭಾವಿಕವಾಗಿ ನಮ್ಮ ಬಳಿ ರೋಗಿಗಳು ಎನಾದರೂ ತೋರಿಸಿಕೊಳ್ಳಲು ಒಬ್ಬರೆ ಬರುತ್ತಾರೆಂದರೆ ಸರಿ. ನಮ್ಮ ಕಡೆ ಬಂದಂತಹ ಗಾಯಾಳು ಅಪಘಾತದಿಂದ ಗಾಯಗೊಂಡ ವ್ಯಕ್ತಿ ಎಂದರೆ ಸರಿ. ಸದರಿ ಅಪಘಾತ ದಿಃ04-06-2024 ರಂದು ಆಗಿದೆ ಎಂದರೆ ಸರಿ. ಸದರಿ ಅಪಘಾತದ ಸ್ಥಳವು ಪಾಳಾ ಎಂಬುವುದಾಗಿ ನೆನಪಿದೆ. ಅಪಘಾತವಾದ ನಂತರ ಆಸ್ಪತ್ರೆಗೆ ರೋಗಿಯನ್ನು ಕರೆದುಕೊಂಡು ಬರಬೇಕಾದರೆ ಸಮಯ ಹೆಚ್ಚು ಕಡಿಮೆ ಆಗಬಹುದು ಎಂದರೆ ಸರಿ. ನಮ್ಮ ಬಳಿ ರೋಗಿ ಬಂದ ಕೂಡಲೆ ನಾವು ಚಿಕಿತ್ಸೆ ಕೊಡುತ್ತೇವೆ ಎಂದರೆ ಸರಿ. ಸದರಿಯವರು ಬಂದು ನಮಗೆ ಎನು ಹೇಳುತ್ತಾರೆ ಅವರ ಮೇಲೆ ನಾವು ಚಿಕಿತ್ಸೆ ಕೊಡುತ್ತೇವೆ ಎಂದರೆ ಸರಿ. ರೋಗಿ ಬಂದ ನಂತರ ಚಿಕಿತ್ಸೆ ಕೊಡುವುದರಲ್ಲಿ ಸ್ವಲ್ಪ ಸಮಯ ಹೆಚ್ಚು ಕಡಿಮೆ ಆಗುತ್ತದೆ ಎಂದರೆ ಸಾಕ್ಷಿ ಹಾಗೇನು ಇಲ್ಲ

ಅಪಘಾತದ ಸಂಬಂಧ ರೋಗಿ ಬಂದರೆ ತಕ್ಷಣ ನಾವು ಚಿಕಿತ್ಸೆ ಕೊಡುತ್ತೇವೆ ಎನ್ನುತ್ತಾರೆ. ಅಪಘಾತ ಎಷ್ಟು ಹೊತ್ತಿಗೆ ಆಗಿದೆ ಎಂದು ನನ್ನ ಸ್ವಂತಕ್ಕೆ ಮಾಹಿತಿ ಇಲ್ಲ ಎಂದರೆ ಸರಿ. ಪೋಲೀಸರು ಕೇಸನ ಸಂಪೂರ್ಣ ತನಿಖೆ ನಡೆಸಿ ಅದರ ವಿವರಗಳ ಬಗ್ಗೆ ದೋಷಾರೋಪಣೆ ಪಟ್ಟಿಸಲ್ಲಿಸುತ್ತಾರೆಂದರೆ ಸರಿ.

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾಹುಬ್ಬಳ್ಳಿ